**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1027/(1111)
ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 27.08.2026
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು.

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾದ ಹುಬ್ಬಳ್ಳಿ ನಗರದಲ್ಲಿ ಬಡವರಿಗೆ ಮತ್ತು ಆರ್ಥಿಕವಾಗಿ ದುರ್ಬಲಗೊಂಡಿರುವ ವರ್ಗದ ಜನರಿಗಾಗಿ ಹಳೇ ಹುಬ್ಬಳ್ಳಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಈ ಹಿಂದೆ ಯೋಜಿಸಿದ್ದು, ಅದರಂತೆ ಸದರಿ ಕಟ್ಟಡದ ನಿರ್ಮಾಣ ಕಾಮಗಾರಿ ಪಾಲಿಕೆಯಿಂದ ನಿರ್ವಹಿಸುತ್ತಿದ್ದು, ಈ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು. | ಹುಬ್ಬಳ್ಳಿ ನಗರದಲ್ಲಿ ಬಡವರಿಗೆ ಮತ್ತು ಆರ್ಥಿಕವಾಗಿ ದುರ್ಬಲಗೊಂಡಿರುವ ವರ್ಗದ ಜನರಿಗಾಗಿ ಹಳೇ ಹುಬ್ಬಳ್ಳಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ಈ ಕೆಳಕಂಡಂತೆ ಪ್ರಾರಂಭಿಸಲಾಗಿರುತ್ತದೆ.<br>1. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ 2015-16 ನೇ ಸಾಲಿನ ರೂ.100.00 ಕೋಟಿ ಯೋಜನೆಯ ಅನುದಾನದಲ್ಲಿ ಮೊದಲ ಹಂತದ ಕಟ್ಟಡ ಕಾಮಗಾರಿಯು ದಿನಾಂಕ: 01-12-2017 ರಂದು ಪ್ರಾರಂಭವಾಗಿರುತ್ತದೆ.<br>2. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ 1.0 ಅನುದಾನದಲ್ಲಿ ಎರಡನೇ ಹಂತದ ಕಟ್ಟಡ ಕಾಮಗಾರಿಯು ದಿನಾಂಕ: 17-06-2022 ರಂದು ಪ್ರಾರಂಭವಾಗಿರುತ್ತದೆ.<br>3. ಕರ್ನಾಟಕ ರಾಜ್ಯ ಲೋಕೋಪಯೋಗಿ ಧಾರವಾಡ ಇಲಾಖೆಯಿಂದ Retaining Wall and Ramp ಕಾಮಗಾರಿಯು ದಿನಾಂಕ:10.07.2025 ರಿಂದ ಪ್ರಾರಂಭವಾಗಿರುತ್ತದೆ.<br>4. ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ Construction of O.T Room ಕಾಮಗಾರಿಯು ದಿನಾಂಕ:13.10.2025 ರಂದು ಪ್ರಾರಂಭವಾಗಿರುತ್ತದೆ. |
| ಆ) | ಈ ಕಾಮಗಾರಿಯ ಗುತ್ತಿಗೆಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿತ್ತು; ಮತ್ತು ಒಪ್ಪಂದದ ಕರಾರಿನಂತೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ನಿಗಧಿಪಡಿಸಿದ್ದ ಅವಧಿ ಮತ್ತು ಕಾಲಮಿತಿ ಎಷ್ಟು; | 1. ಹುಬ್ಬಳ್ಳಿ-ಧಾರವಾಡ, ಮಹಾನಗರ ಪಾಲಿಕೆಯಿಂದ ನಿರ್ವಹಿಸಿದ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ :-<br>ಅ). ಕಾಮಗಾರಿಯ ಹೆಸರು: Construction Of New Hospital Work at Old hubli in Ward No.60 (ಹಂತ -1)<br>• ಅನುದಾನ: 2015-16ನೇ ಸಾಲಿನ ರೂ.100.00 ಕೋಟಿ ಯೋಜನೆಯ ಅನುದಾನ<br>• ಅಂದಾಜು ಮೊತ್ತ: 700.00 ಲಕ್ಷಗಳು<br>• ಗುತ್ತಿಗೆದಾರರ ಹೆಸರು: ಸುಪ್ರದಾ ಕನ್ಸ್ಟ್ರಕ್ಷನ್<br>• ಕಾಮಗಾರಿ ಪ್ರಾರಂಭದ ದಿನಾಂಕ: 01.12.2017ರಂದು ಪ್ರಾರಂಭವಾಗಿರುತ್ತದೆ.<br>• ಕಾಮಗಾರಿ ಮುಕ್ತಾಯದ ದಿನಾಂಕ:: 31.03.2022ರಂದು ಪೂರ್ಣಗೊಂಡಿರುತ್ತದೆ.<br>ಆ. ಕಾಮಗಾರಿಯ ಹೆಸರು: Modernization of Jayachamarajnagar Nagar (Town Hall) Nagara Bhavan by providing seating arrangements stage lighting sound systems for dramas music dance and other cultural activities in W No 47 at Hubballi city and (ii) |

| | | |
|---|---|---|
| | | Continuation work of Construction of HDMC Old Hubballi Multispeciality Hospital in ward no 60 of Hubballi Dharwad. (ಹಂತ-02)<br>• ಅನುದಾನ : ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ 1.0 ಅನುದಾನ<br>• ಗುತ್ತಿಗೆದಾರರ ಹೆಸರು : ಬಾಲಾಜಿ ಕನ್ಸ್ಟ್ರಕ್ಷನ್<br>• ಕಾಮಗಾರಿ ಪ್ರಾರಂಭದ ದಿನಾಂಕ: 17-06-2022 ರಂದು ಪ್ರಾರಂಭವಾಗಿರುತ್ತದೆ.<br>• ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>2. ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆ, ಧಾರವಾಡ ವೃತ್ತದಿಂದ ನಿರ್ವಹಿಸಿದ ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ :-<br>ಅ) ಕಾಮಗಾರಿಯ ಹೆಸರು: Development of old Hubli Hospital HDMC Hubli Taluka of Dharwad. (Construction of Retaining wall Stracher ramp, Attaenders Room and other Allied Works at 3rd Floor)<br>• ಗುತ್ತಿಗೆದಾರರ ಹೆಸರು: ರಾಮಕೃಷ್ಣ ಯಲ್ಲಪ್ಪ ಬಬಲಿ ಪ್ರಥಮ ದರ್ಜೆ ಗುತ್ತಿಗೆದಾರರು.<br>• ಕಾಮಗಾರಿ ಪ್ರಾರಂಭದ ದಿನಾಂಕ: 10.07.2025<br>• ಕಾಮಗಾರಿ ಮುಕ್ತಾಯದ ದಿನಾಂಕ:05.04.2027 (ಕಾಮಗಾರಿ ಪ್ರಗತಿಯಲ್ಲಿದೆ.)<br>3. ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿರ್ವಹಿಸಿದ ಕಾಮಗಾರಿಯ ವಿವರಗಳು<br>ಅ) ಕಾಮಗಾರಿ ಹೆಸರು: Construction of O.T Room and other development works at Family Welfare Center (City MCH) in old Hubli. In Hubli Tq Dharwad Dist.<br>• ಗುತ್ತಿಗೆದಾರರ ಹೆಸರು: B. R. Costructions<br>• ಕಾಮಗಾರಿ ಪ್ರಾರಂಭದ ದಿನಾಂಕ: 13.10.2025<br>• ಕಾಮಗಾರಿ ಮುಕ್ತಾಯದ ದಿನಾಂಕ:31.08.2026 (ಕಾಮಗಾರಿ ಪ್ರಗತಿಯಲ್ಲಿದೆ.) |
| ಇ) | ಸದರಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೇ: ಇದ್ದಲ್ಲಿ ಈ ಕಟ್ಟಡವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸದೇ ಇರುವುದಕ್ಕೆ ಕಾರಣಗಳೇನು ಮತ್ತು ಹಸ್ತಾಂತರಿಸುವ ಷರತ್ತುಗಳೇನು? (ತಿಳಿಸುವುದು) | ಹಳೇ ಹುಬ್ಬಳ್ಳಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ.<br>ಸದರಿ ಆಸ್ಪತ್ರೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಲು ಪಾಲಿಕೆಯಿಂದ ದಿನಾಂಕ: 20/09/2025 ರಂದು ಪತ್ರ ಬರೆಯಲಾಗಿದ್ದು, ಸದರಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br>ಸದರಿ ಆಸ್ಪತ್ರೆಯನ್ನು ಹಸ್ತಾಂತರಿಸಲು ಷರತ್ತುಗಳು ಈ ಕೆಳಕಂಡಂತಿರುತ್ತವೆ.<br>• ಕಾಲ ಕಾಲಕ್ಕೆ ಅನ್ವಯವಾಗುವ ಸರ್ಕಾರ, ಪಾಲಿಕೆ ಆದೇಶ/ನಿಯಮಗಳನ್ನು ಪಾಲಿಸುವುದು.<br>• ಸದರಿ ಆಸ್ಪತ್ರೆಯ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಹಸ್ತಾಂತರಿಸಲಾಗಿದೆಯೋ, ಆ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸುವುದು.<br>• ಸದರಿ ಆಸ್ಪತ್ರೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಜಂಟಿ ಸಹಭಾಗಿತ್ವದಲ್ಲಿಟ್ಟುಕೊಂಡು ನಾಮಫಲಕದಲ್ಲಿ ಪಾಲಿಕೆಯ ಹೆಸರನ್ನು ನಾಮಕರಣ ಮಾಡುವುದು. |

| | | |
|---|---|---|
| | | • ಸದರಿ ಆಸ್ಪತ್ರೆಗೆ ಸಂಬಂಧಿಸಿದ ಆರೋಗ್ಯ ಸುರಕ್ಷಾ ಟ್ರಸ್ಟ್ ಸಮಿತಿಯಲ್ಲಿ ಪಾಲಿಕೆಯ ಪೂಜ್ಯ ಮಹಾಪೌರರನ್ನು ಸೇರಿಸಿಕೊಳ್ಳುವುದು.<br>• ಪಾಲಿಕೆಯ ಹೆಸರಿಗೆ ಚ್ಯುತಿ ಉಂಟಾಗದಂತೆ, ಪಾಲಿಕೆಗೆ ಯಾವುದೇ ತರಹದ ಆರ್ಥಿಕ ವೆಚ್ಚ ಬರದಂತೆ ನಿರ್ವಹಿಸುವುದು.<br>• ಸದರಿ ಆಸ್ಪತ್ರೆ ಆಸ್ತಿಯ ಮೇಲೆ ಪಾಲಿಕೆಯು ತನ್ನ ಹಕ್ಕನ್ನು ಉಳಿಸಿಕೊಂಡಿರುತ್ತದೆ. ಸದರಿ ಅಸ್ತಿಯನ್ನು ಯಾರಿಗೂ ಪರಭಾರೆ ಮಾಡಲು ಬರುವುದಿಲ್ಲ, ಹಾಗೂ ಬೇರೆಯವರಿಗೆ ಬಾಡಿಗೆ ( Sub Lease) ಮಾಡಲು ಬರುವುದಿಲ್ಲ.<br>• ಪಾಲಿಕೆಯಿಂದ ಈ ಹಿಂದೆ ಹಸ್ತಾಂತರಿಸಿದ. ಹುಬ್ಬಳ್ಳಿಯ ನವನಗರದ ಕ್ಯಾನ್ಸರ್ ಆಸ್ಪತ್ರೆ ಹಾಗೂ ಲ್ಯಾಮಿಂಗ್ಟನ್ ಶಾಲೆಯನ್ನು ಪಾಲಿಕೆಯಿಂದ ಹಸ್ತಾಂತರಿಸುವ ಸಂದರ್ಭದಲ್ಲಿ ಯಾವ ಷರತ್ತುಗಳೊಂದಿಗೆ ನಿರ್ವಹಣೆ ಮಾಡಲಾಗಿದೆಯೋ ಅದೇ ಷರತ್ತಿನೊಂದಿಗೆ ಹಳೇ ಹುಬ್ಬಳ್ಳಿ ಆಸ್ಪತ್ರೆಯನ್ನು ಮಾತ್ರ ಆರೋಗ್ಯ ಇಲಾಖೆಗೆ ಹಸ್ತಾಂತರಿಸಲು ಕ್ರಮ ಜರುಗಿಸಲು ಆದೇಶಿಸಲಾಗಿದೆ. |

**ಸಂಖ್ಯೆ: ನಅಇ 301 ಎಂಎಸ್‌ಇ 2026 (ಇ)**

**(ಡಾ.ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು